**ಇಂದು ದಿನಾಂಕ *: 27.02.2023* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**<u>ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ಸಿ.ಎನ್.ವಕೀಲರಿಂದಃ</u>**

ನಿ.ಪಿ.05– 2009 ನೇ ಸಾಲಿಗೆ ಸಂಬಂಧ ಪಟ್ಟದ್ದಾಗಿರುತ್ತದೆ. ನಿ.ಪಿ.05 ಟಿ.ಟಿ. ಪ್ರಭುರವರಿಗೆ ಸಂಬಂಧ ಪಟ್ಟ ದಾಖಲೆಯಾಗಿರುತ್ತದೆ. ನಿ.ಪಿ.06 ರಿಂದ 08 ರಲ್ಲಿ ದಾಖಲೆಯಲ್ಲಿ ಸ್ವತ್ತಿನ ಚೆಕ್ಕುಬಂದಿ ನಮೂದು ಇದೆ. ನಿ.ಪಿ.11 ಟಿ.ಟಿ. ಪ್ರಭುರವರಿಗೆ ಸಂಬಂಧ ಪಟ್ಟ ದಾಖಲೆಯಾಗಿದೆ. ಅದು ನಾಲ್ಕು ಎಕರಗೆ ಸಂಬಂಧ ಪಟ್ಟದ್ದಾಗಿರುತ್ತದೆ. ಸ.ನಂ. 47 ರ ಜಮೀನು 2007 ರಲ್ಲಿ ರೀ ಸರ್ವೆ ನಂಬರ್ ಆಗಿರುತ್ತದೆ. ಅದರ ಬಗ್ಗೆ ಕ್ರಯಪತ್ರ ಹಾಜರು ಪಡಿಸಿದ್ದೇನೆ. ನಿ.ಪಿ.11 ಸಿದ್ದನಾಯಕನ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ನಿ.ಪಿ.11 ಅನ್ನು ದಾವೆಗಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.11 ರಲ್ಲಿ ಕ್ರಮ ಸಂ. 1 ರಿಂದ 10 ರಲ್ಲಿ ಕ್ರ.ಸಂ.03 ಮತ್ತು 04 ಕಾಣುತ್ತಿಲ್ಲ ಎಂದರೆ ಸರಿ. ನಿ.ಪಿ.11 ರ ಮೊದಲ ಅರ್ಧ ಭಾಗ ಮತ್ತು ಅದರ ಉಳಿದ ಅರ್ಧ ಭಾಗ ಬೇರೆ ಬೇರೆ ದಾಖಲೆ ಎಂದರೆ ಗೊತ್ತಿಲ್ಲ. ಕ್ರಯಪತ್ರದ ಆಧಾರ ಮೇಲೆ ನನ್ನ ಹೆಸರಿಗೆ 1985 ರಲ್ಲಿ ಖಾತೆ ಆಗಿದೆ.

ಸ.ನಂ. 47 ರಲ್ಲಿ ನಾಲ್ಕು ಎಕರೆಗೆ ನನ್ನ ಹೆಸರಿಗೆ ಖಾತೆ ಆಗಿದೆ. ನನ್ನ ಖಾತೆ ಆದ ಬಗ್ಗೆ ದಾಖಲೆ ಕೊಟ್ಟಿದ್ದೇನೆ. ಅದರ ಬಗ್ಗೆ ಹಕ್ಕು ಪತ್ರ ಕೊಟ್ಟಿದ್ದೇನೆ. ನಿ.ಪಿ.03 ಮತ್ತು ನಿ.ಪಿ.04 ವ್ಯತ್ಯಾಸದಿಂದ ಕೂಡಿದೆ ಎಂದರೆ ಸರಿಯಲ್ಲ. ನಿ.ಪಿ.05 ದಾಖಲೆ 44 ಎಕರೆಗೆ ಸಂಬಂಧ ಪಟ್ಟಂತೆ ಹಾಜರು ಪಡಿಸಿದ್ದೇನೆ. ನಿ.ಪಿ.12 ರ ದಾಖಲೆ 1985 ರಿಂದೀಚೆಗೆ ಸಂಬಂಧಿಸಿದ ದಾಖಲೆಯಾಗಿರುತ್ತದೆ. ನನ್ನ ಮಾರಾಟಗಾರರು ನನಗೆ ಮಾಡಿದ ನಾಲ್ಕು ಎಕರೆ ಜಮೀನಿನ ಸ್ವಾಧೀನದಲ್ಲಿದ್ದರು ಎಂದು ತೋರಿಸಲು ದಾಖಲೆ ಹಾಜರು ಪಡಿಸಿಲ್ಲ. ಸಾಕ್ಷಿ ಮುಂದುವರೆದು ಅದರ ಬಗ್ಗೆ ಆರ್.ಟಿ.ಸಿ ಇದೆ ಅದನ್ನು ಹಾಜರು ಪಡಿಸಿಲ್ಲ ಎಂದು ನುಡಿಯುತ್ತಾರೆ. ಸ.ನಂ. 47 ರ ಪೈಕಿ 4 ಎಕರೆ ಬಗ್ಗೆ ಪ್ರತ್ಯೇಕ ಪೋಡ್ ಆಗಿದೆ. ಪೋಡ್ ಮಾಡಲು ಅರ್ಜಿ ಕೊಟ್ಟಿದ್ದೇನೆ. ಅದನ್ನು 2009 ರಲ್ಲಿ ಕೊಟ್ಟಿದ್ದೇನೆ. ಅದರ ಬಗ್ಗೆ ದಾಖಲೆ ಹಾಜರು ಪಡಿಸಿದ್ದೇನೆ. ಪಕ್ಕಾ ಪೋಡು

ಮಾಡಿಕೊಡಲು ಕಟ್ಟ ಬೇಕಾದ ಶುಲ್ಕ ಕಟ್ಟಿದ್ದೇನೆ. ಅದರ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ. ನಾನು ಸ.ನಂ. 47 ರಲ್ಲಿ ನಾಲ್ಕು ಎಕರೆ ಜಮೀನನ್ನು ಯಾವತ್ತೂ ಯಾರಿಂದಲೂ ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ದಾವೆಯನ್ನು ಸುಕನ್ಯರವರ ಮೇಲೆ ಹಾಕಿದ್ದೇನೆ. ಆಕೆ ನನ್ನ ಮೇಲೆ ದಾವೆ ನಂ. 103/22 ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನಾನು ಪ್ರತಿವಾದಿಯ ಸ್ವಾಧೀನಕ್ಕೆ ತೊಂದರೆ ಕೊಡಬಾರದು ಎಂದು ಆದೇಶವಾಗಿದೆ ಎಂದರೆ ಗೊತ್ತಿಲ್ಲ. ಎಲ್ಲಾ ವಿಷಯ ಗೊತ್ತಿದ್ದರೂ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಮಾಲಿಂಗಿ ಗ್ರಾಮದ ಸ.ನಂ. 62/14 ರಲ್ಲಿ ಎರಡು ಎಕರೆ ಜಮೀನಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಸ.ನಂ.62/14 ಜಮೀನಿಗೂ ನನಗೂ ಯಾವುದೇ ಸಂಬಂಧ ಇಲ್ಲ. ಸದರಿ ಜಮೀನು ಪ್ರತಿವಾದಿಗೆ ಎಂ.ಆರ್.ನಂ.8/97-98 ರ ಮೂಲಕ ಬಂದಿದೆ ಎಂದರೆ ಗೊತ್ತಿಲ್ಲ. ಆಕೆ 1960 ನೇ ಸಾಲಿನಿಂದ ಸದರಿ ಜಮೀನಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಗೊತ್ತಿಲ್ಲ. ಆಕೆ ಸ್ವಾಧೀನ ಇರುವ ಜಮೀನನ್ನು ಕಬಳಿಸಲು ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ದಾವೆ ಮಾಡಿ , ಸುಳ್ಳು ದಾಖಲೆಗಳನ್ನು ಹಾಜರು ಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ. ಮತ್ತು ಪ್ರ.ದ.ನ್ಯಾದಂ.***
**ಪಿರಿಯಾಪಟ್ಟಣ**